ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಜಿ.ಎಂ. ಪಾಟೀಲ್

ಸುರೇಶ್ ನಾಯ್ಕ -ವಿರುದ್ಧ ದಿನೇಶ್ ಕುಮಾರ್ ಮತ್ತು ಇನ್ನೊಬ್ಬರು

*ಸಂಕೀರ್ಣ ಮೊದಲನೇ ಮೇಲ್ಮನವಿ ಸಂಖ್ಯೆ: ೧೦೦೬೨/೨೦೧೫ (ಎಂವಿ),

ದಿನಾಂಕ ೨೬ನೇ ಸೆಪ್ಟೆಂಬರ್, ೨೦೧೯.

ತೀರ್ಪು

ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ:

ಎಂ.ಎ.ಸಿ.ಟಿ., ಬಳ್ಳಾರಿಯ ಈ ಕಡತದಲ್ಲಿರುವ ಎಂ.ವಿ.ಸಿ.ಸಂಖ್ಯೆ: 1346/2011 ರಲ್ಲಿನ ಕ್ಲೇಮುದಾರರು ದಿನಾಂಕ: 22.12.2010 ರಂದು ಸಂಭವಿಸಿದ ರಸ್ತೆ ಅಪಘಾತದಲ್ಲಿ ಉಂಟಾದ ಗಾಯಗಳಿಗೆ ಸಂಬಂಧಿಸಿದಂತೆ ನೀಡಲಾದ ನಷ್ಟ ಪರಿಹಾರವನ್ನು ಹೆಚ್ಚಿಸುವಂತೆ ಕೋರಿ ಸಲ್ಲಿಸಿದ ಅಪೀಲು ಇದಾಗಿದೆ.

2.ದಿನಾಂಕ: 22.12.2010 ರಂದು ಕ್ಲೇಮುದಾರನು ಬೈಸಿಕಲ್ನಲ್ಲಿ ಹಿಂಬದಿ ಸವಾರನಾಗಿ ಪ್ರಯಾಣಿಸುತ್ತಿದ್ದಾಗ ನೋಂದಣಿಸಂಖ್ಯೆ: ಎಪಿಝಡ್ -5263 ಅನ್ನು ಹೊಂದಿರುವ ಆಂಧ್ರಪ್ರದೇಶ ರಾಜ್ಯ ರಸ್ತೆ ಸಾರಿಗೆ ನಿಗಮದ ಡಿಜಿಟಿ ಸರಕು ವಾಹನವು ಆ ಬೈಸಿಕಲ್ಗೆ ಗುದ್ದಿದ ಪರಿಣಾಮ ಅಪಘಾತವಾಗಿ ಕ್ಲೇಮುದಾರನು ಗಾಯಗೊಂಡಿರುವುದು ದಾಖಲೆಗಳಿಂದ ತಿಳಿದುಬರುತ್ತದೆ.

3. ಸದರಿ ಅಪಘಾತ, ಹಾಗೆಯೇ ಅಪಘಾತದಲ್ಲಿ ಕ್ಲೇಮುದಾರನು ಗಾಯಗಳಿಂದ ಬಾಧಿತನಾಗಿರುವುದು ಸಹ ವಿವಾದವಾಗಿರುವುದಿಲ್ಲ.ಕ್ಲೇಮುದಾರನ ಬಲ ಕುತ್ತಿಗೆಯ ಮೂರನೇ ಮೂಳೆಯು ಮಧ್ಯ ಭಾಗದಲ್ಲಿ ಮುರಿದೆ ಮತ್ತು ವಸ್ತಿ ಕುಹರದ (Pelvis) ನ ಗುಂಜೆಲುಬು (Public bone) ನ ಒಳಭಾಗವು ಮುರಿದಿರುವುದರೊಂದಿಗೆ ಅವನ ಶಿಶ್ನ ಮತ್ತು ವೃಷಣಗಳು ಛೇದಗೊಂಡಿರುವುದು ದಾಖಲೆಗಳಿಂದ ತಿಳಿದುಬರುತ್ತದೆ.

4. ಕ್ಲೇಮುದಾರನಿಗೆ ಪ್ರಾರಂಭಿಕವಾಗಿ ರಾಯದುರ್ಗದ ಸಿಹೆಚ್ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು.ನಂತರದಲ್ಲಿ ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ಸ್ಥಳಾಂತರಿಸಿದ್ದು ಸದರಿ ಆಸ್ಪತ್ರೆಯಲ್ಲಿ ಕ್ಲೇಮುದಾರನುದಿನಾಂಕ: 23.12.2010 ರಿಂದ ದಿನಾಂಕ: 28.01.2011 ರ ವರೆಗೆ ಚಿಕಿತ್ಸೆ ಪಡೆದಿರುತ್ತಾನೆ.ಕೇಮುದಾರನಿಗಾದ ಗಾಯಗಳಿಗೆ ಶಸ್ತ್ರ ಚಿಕಿತ್ಸೆಯ ಮೂಲಕ ಚಿಕಿತ್ಸೆ ನೀಡಿದ್ದರಿಂದಾಗಿ ಅವನ ಶಿಶ್ನವನ್ನು ಮತ್ತು ವೃಷಣಗಳನ್ನು ಸಂಪೂರ್ಣವಾಗಿ ತೆಗೆದುಹಾಕಲಾಗಿದೆ.ತದನಂತರ ಅಪಘಾತದ ದಿನಾಂಕದಂದು ಕ್ಲೇಮುದಾರನು 17 ವರ್ಷ ವಯಸ್ಸಿನವನಾಗಿದ್ದು, ಅಪ್ರಾಪ್ತ ವಯಸ್ಕನಾಗಿದ್ದು, ಮೇಲೆ ಹೇಳಲಾದ ಗಾಯಗಳಿಗಾಗಿ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಪರಿಹಾರವನ್ನು ಕೋರಿ ಕ್ಲೇಮು ಅರ್ಜಿಯನ್ನು ದಾಖಲಿಸಿರುತ್ತಾನೆ.

5. ಕ್ಲೇಮುದಾರನ ತಂದೆಯು ಹೂಡಿದ್ದ ಸದರಿ ವ್ಯವಹರಣೆಗಳಲ್ಲಿ ಅವನ ತಂದೆಯು ಪ್ರಾ.ಸಾ .1 ರಂತೆ ಸಾಕ್ಷ್ಯವನ್ನು ಮಂಡಿಸಿರುತ್ತಾನೆ ಮತ್ತು ಗಾಯಗಳ ಸ್ವರೂಪವನ್ನು ಮತ್ತು ಸದರಿ ಗಾಯಗಳಿಂದಾಗಿ ಕ್ಲೇಮುದಾರನ ಭವಿಷ್ಯದ ಮೇಲೆ ತೀವ್ರ ಪರಿಣಾಮಗಳನ್ನು ವಿವರಿಸುವ ನಿಟ್ಟಿನಲ್ಲಿ ಪ್ರಾ.ಸಾ .2 ಆಗಿ ಸಾಕ್ಷ್ಯ ನೀಡಿದ ವೈದ್ಯರಾದ ಡಾ || ಲಕ್ಷ್ಮೀ ನಾರಾಯಣ ಅವರ ಉಪಸ್ಥಿತಿಯನ್ನು ಸಹ ಖಚಿತಪಡಿಸಿರುವನು.ಒಟ್ಟಾರೆಯಾಗಿ ತನ್ನ ಕ್ಲೇಮನ್ನು ಸಮರ್ಥಿಸುವುದಕ್ಕೆ ಅವನು ಎಂಟು ದಸ್ತಾವೇಜುಗಳನ್ನು ಹಾಜರುಪಡಿಸಿರುವನು ಮತ್ತು ಅವುಗಳನ್ನು ಗುರುತು ಮಾಡಲಾಗಿದೆ.ಸದರಿ ವ್ಯವಹರಣೆಗಳಲ್ಲಿ, ವಿವಿಧ ಕಾರಣಗಳ ಮೇಲೆ ಒಟ್ಟು 50,00,000/-ರೂಪಾಯಿಗಳನ್ನು ಪರಿಹಾರವಾಗಿ ಕ್ಲೇಮುದಾರನು ಕೋರಿರುವನು.ಆದಾಗ್ಯೂ, ಕ್ಲೇಮುದಾರನಿಗೆ ನ್ಯಾಯಾಧಿಕರಣದ ಮುಂದೆ ಅದನ್ನು ಸಮರ್ಥಿಸಿಕೊಳ್ಳಲು ಸಾಧ್ಯವಾಗಿಲ್ಲ ಮತ್ತು ಅದರಂತೆಯೇ ನ್ಯಾಯಾಧಿಕರಣವು ಕ್ಲೇಮು ಅರ್ಜಿಯನ್ನು ಪುರಸ್ಕರಿಸಿ ಅರ್ಜಿ ಸಲ್ಲಿಸಿದ ದಿನಾಂಕದಿಂದ ಇಡೀ ಹಣವನ್ನು ಠೇವಣಿ ಇಡುವ ಈ ದಿನಾಂಕದವರೆಗೆ ವಾರ್ಷಿಕ ಶೇ .8 ರ ಬಡ್ಡಿದರದೊಂದಿಗೆ ಒಟ್ಟು 2,70,000/-ರೂಪಾಯಿಗಳ ಪರಿಹಾರವನ್ನು ನೀಡಿರುತ್ತದೆ.ಇಡೀ ಮೊಬಲಗನ್ನು ಹಾಗೆ ಸಂದಾಯ ಮಾಡಬೇಕೆಂದು ಐತೀರ್ಪು ನೀಡುವಾಗ, ಐತೀರ್ಪಿನ ಪರಿಹಾರವನ್ನು ಈ ಕೆಳಗಿನಂತೆ ಲೆಕ್ಕ ಹಾಕಲಾಗಿದೆ:

1) ನೋವು ಮತ್ತು ಸಂಕಟದ ಬಾಧೆಗೆ 30,000/-ರೂಪಾಯಿಗಳು

i) ಸೌಲಭ್ಯ ನಷ್ಟವಾಗಿ 30,000/-ರೂಪಾಯಿಗಳು

iii) ವೈವಾಹಿಕ/ದಾಂಪತ್ಯ ನಷ್ಟವಾಗಿ 50,000/-ರೂಪಾಯಿಗಳು

iv) ವೈದ್ಯಕೀಯ ವೆಚ್ಚವಾಗಿ 15,000/-ರೂಪಾಯಿಗಳು

v) ಶುಶ್ರೂಷೆ ವೆಚ್ಚವಾಗಿ 5,000/-ರೂಪಾಯಿಗಳು

vi) ಹೆಚ್ಚುವರಿ ಪೋಷಣೆ ಮತ್ತು ಆಹಾರ ವೆಚ್ಚವಾಗಿ 3,000/ರೂಪಾಯಿಗಳು

vii) ಸಾರಿಗೆ ವೆಚ್ಚವಾಗಿ 3,000/-ರೂಪಾಯಿಗಳು.ಅಂಗವೈಕಲ್ಯತೆಯ ಕಾರಣದಿಂದ ಭವಿಷ್ಯ ಆದಾಯದ ನಷ್ಟದ ವೆಚ್ಚವಾಗಿ 1,29,600/-ರೂಪಾಯಿಗಳು.

6. ನ್ಯಾಯಾಧಿಕರಣವು ನೀಡಿದ ಪರಿಹಾರದ ಹಣ ತುಂಬಾ ಕನಿಷ್ಠತಮವಾಗಿದೆ ಮತ್ತು ಯಾವುದೇ ಶೀರ್ಷಿಕೆಗಳ ಅಡಿಯಲ್ಲಿ ಯುಕ್ತವಾದ ಪರಿಹಾರವನ್ನು ನೀಡಿರುವುದಿಲ್ಲ, ಹಾಗಾಗಿ, ಈ ನ್ಯಾಯಾಲಯವು ಸದರಿ ಐತೀರ್ಪನ್ನು ಮರು ಪರಿಗಣಿಸಲು ಮತ್ತು ಮರು ನಿರ್ಧರಣೆಗೆ ಮಾಡುವುದು ಅಗತ್ಯವೆಂದು ಪ್ರಾರ್ಥಿಸಿ ನ್ಯಾಯಾಧಿಕರಣದ ಸದರಿ ತೀರ್ಪನ್ನು ಕ್ಲೇಮುದಾರನು ಈ ಅಪೀಲಿನ ಮೂಲಕ ಪ್ರಶ್ನಿಸಿರುವನು.

7. ಈ ವ್ಯವಹರಣೆಗಳಲ್ಲಿ, ಮಾನ್ಯ ನ್ಯಾಯವಾದಿಗಳಾದ ಶ್ರೀ ಅಮೀರ್ಖಾನ್ ಎ. ಪಠಾಣ್ ಎಂಬುವವರು ಅಪೀಲನ್ನು ಹೂಡಿದ್ದರೂ, ಶ್ರೀ ಗಿರೀಶ್ ಭಟ್ (ನೋಂದಣಿಸಂಖ್ಯೆ: ಕರ್ನಾಟಕ 1404/2017) ಇವರು ಇದೇ ರೀತಿಯ ಸನ್ನಿವೇಶಗಳಿಂದ ಬಾಧಿತನಾದವನಿಗೆ ಪರಿಹಾರವನ್ನು ಯಾವ ರೀತಿಯಲ್ಲಿ ಪರಿಗಣಿಸಲಾಗಿದೆ ಎಂಬ ಕಾನೂನು ವಿಷಯದಲ್ಲಿ ಈ ನ್ಯಾಯಾಲಯಕ್ಕೆ ನೆರವು ನೀಡಿರುವರು ಮತ್ತು ಈ ರೀತಿಯ ಗಾಯಗಳನ್ನು ಇತರ ರಾಷ್ಟ್ರಗಳಲ್ಲಿ ಪರಿಹಾರವನ್ನು ನೀಡುವುದಕ್ಕಾಗಿ ಈ ರೀತಿಯ ಗಾಯಗಳನ್ನು ಹೇಗೆ ಪರಿಗಣನೆಗೆ ತೆಗೆದುಕೊಳ್ಳುತ್ತಾರೆ ಎಂಬ ವಿಷಯದಲ್ಲಿ ಆಳವಾದ ಅಧ್ಯಯನ

ಕೈಗೊಂಡು ಈ ವಿಷಯದ ಬಗ್ಗೆ ವ್ಯಾಪಕ ಸಂಶೋಧನೆ ನಡೆಸುವ ಮೂಲಕ ಈ ನ್ಯಾಯಾಲಯದ ಗಮನಕ್ಕೂ ಸಹ ತಂದಿರುವರು.

8. ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಅಮಿರ್ಖಾನ್ ಎ. ಪಠಾಣ್ ರವರ ವಾದಗಳಿಗೆ ಪೂರಕವಾಗಿ ಮಂಡಿಸುತ್ತಿದ್ದ ಶ್ರೀ ಗಿರೀಶ್ ಭಟ್ ಅವರ ಸಮ್ಮುಖದಲ್ಲಿ ಮತ್ತು 2 ನೇ ಪ್ರತ್ಯರ್ಜಿದಾರನಾದ ಆಂಧ್ರಪ್ರದೇಶ ರಸ್ತೆ ಸಾರಿಗೆ ನಿಗಮದ ಪರ ನ್ಯಾಯವಾದಿಗಳಾದ ಶ್ರೀಮತಿ ಅರುಣ ಆರ್. ದೇಶಪಾಂಡೆಯವರ ವಾದಗಳನ್ನು ಈ ಅಪೀಲಿನಲ್ಲಿ ಆಲಿಸಲಾಗಿದೆ.

9. ಇದೊಂದು ವಿಶಿಷ್ಟ ಸ್ವರೂಪದ ಮೊಕದ್ದಮೆಯಾಗಿದೆ ಎಂದು ಭಾವಿಸಲಾಗಿದೆ.ಗಾಯಗೊಂಡಿರುವ ಕ್ಲೇಮುದಾರನ ವಯಸ್ಸು ಅಪಘಾತ ನಡೆದ ದಿನಾಂಕದಂದು 17 ವರ್ಷ. ಕ್ಲೇಮುದಾರನು ಆರೋಗ್ಯವಂತ, ದೃಢಕಾಯನಾದ ಹುಡುಗನಾಗಿದ್ದವನೆಂದು ಮತ್ತು ಆ ಸಂದರ್ಭದಲ್ಲಿ ಅವನು ತನ್ನ ಶಿಕ್ಷಣವನ್ನು ಮುಂದುವರೆಸುತ್ತಿರುವ ಅಂಶವೆಲ್ಲವು ದಾಖಲೆಗಳಿಂದ ತಿಳಿಯುತ್ತದೆ.ಅಪಘಾತದ ದುರ್ದೈವ ದಿನದಂದು ಅವನು ಬೈಸಿಕಲ್ನ ಹಿಂಬದಿ ಸವಾರನಾಗಿ ಪ್ರಯಾಣಿಸುತ್ತಿದ್ದಾಗ ಆಂಧ್ರಪ್ರದೇಶ ರಾಜ್ಯ ರಸ್ತೆ ಸಾರಿಗೆ ನಿಗಮದ ಡಿಜಿಟಿ ಸರಕು ವಾಹನವು ಅವನಿಗೆ ಡಿಕ್ಕಿ ಹೊಡೆದ ಪರಿಣಾಮ ಮೇಲೆ ನಿರೂಪಿಸಲಾದ ಗಾಯಗಳುಂಟಾದವು.ಈ ಗಾಯಗಳು ಬಾಧಿತನ ಬದುಕನ್ನು ಅಕ್ಷರಶಃ ಬದಲಾಯಿಸುವಷ್ಟು ಎ ತೀವ್ರ ಗಂಭೀರ ಸ್ವರೂಪದ್ದಾಗಿದೆ ಮತ್ತು ಅವನು ಪುರುಷತ್ವವನ್ನು ಪಡೆಯುವ ಮುಂಚೆಯೇ ಅವನು ಪುಲ್ಲಿಂಗದಿಂದ ನಿರ್ಲಿಂಗಿಯಾಗಿ ಪರಿವರ್ತನೆಯಾಗುವಂತಹ ಶೋಚನೀಯ ಸ್ಥಿತಿಗೆ ಅವನನ್ನು ತಂದು ನಿಲ್ಲಿಸಿದೆ.ಅಂದರೆ, ಅವನ ಶಿಶ್ನ ಮತ್ತು ವೃಷಣಗಳನ್ನು ತೆಗೆದುಹಾಕಿರುವುದರಿಂದ ಅವನ ಪುರುಷತ್ವವನ್ನು ಪೂರ್ವಸ್ಥಿತಿಗೆ ತರಲು ಸಾಧ್ಯವಾಗದು; ಅವನಿಗಾದ ದೈಹಿಕ ಗಾಯಗಳಿಗಿಂತ ಹೆಚ್ಚಾಗಿ, ಅಪಘಾತ ನಡೆದ ದಿನಾಂಕದಿಂದ ಅಧಿವಿಚಾರಣಾಧೀನ ನ್ಯಾಯಾಲಯದ ಮುಂದೆ ಅವನು ಕ್ಲೇಮು ಅರ್ಜಿ ಸಲ್ಲಿಸುವವರೆಗೆ ಅವನು ಅನುಭವಿಸಿದ ಮಾನಸಿಕ ಯಾತನೆಯನ್ನು ಯುಕ್ತವಾಗಿ ವಿವೇಚಿಸಿಯೇ ಇಲ್ಲ. ನ್ಯಾಯಾಧಿಕರಣವು ಕ್ಲೇಮುದಾರನಿಗಾದ ಗಾಯಗಳನ್ನು ಅವನ ಗಳಿಕೆಯ ಸಾಮರ್ಥ್ಯ ಮತ್ತು ಭವಿಷ್ಯ ಜೀವದ ದೃಷ್ಟಿಕೋನದಿಂದಲೇ ನೋಡಿ ಕೇಮುದಾರನ ಈ ಮೊಕದ್ದಮೆಯನ್ನು ಮತ್ತೊಂದು ಕೇಮು ಅರ್ಜಿ ಎಂಬಂತೆಯೇ ಪರಿಗಣಿಸಿದೆ.ಇಂತಹ ದೃಷ್ಟಿಕೋನದಿಂದಾಗಿ ಅಪಘಾತ ನಂತರದ ಗಂಭೀರ ಪರಿಣಾಮಗಳನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ.ಆದುದರಿಂದ ಇಂತಹ ಸಂಗತಿ ಮತ್ತು ಸನ್ನಿವೇಶಗಳಲ್ಲಿ, ಈ ನ್ಯಾಯಾಲಯವು, ವಾದಗಳು ಮತ್ತು ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯಗಳ ಹಿನ್ನೆಲೆಯಲ್ಲಿ ನ್ಯಾಯಾಧಿಕರಣವು ನೀಡಿದ ಇಡೀ ತೀರ್ಪನ್ನು ಮರುಪರಿಗಣಿಸಲು ಅಗತ್ಯವೆಂದು ಪರಿಗಣಿಸುತ್ತದೆ.

10. ಮಾನ್ಯ ನ್ಯಾಯವಾದಿಗಳಾದ ಶ್ರೀ ಗಿರೀಶ್ ಭಟ್ ಅವರು ಮೋಟಾರು ವಾಹನಗಳ ಅಧಿನಿಯಮ ಅಥವಾ ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮದ ಅಡಿಯಲ್ಲಿನ ಯಾವುದೇ ಉಪಬಂಧಗಳು ಇತರ ಅವಯವಗಳ ಗಾಯದ ತೀವ್ರತೆಯನ್ನು ಮಾತ್ರ ಪರಿಗಣಿಸಲಾಗಿದೆಯೇ ಹೊರತು, ಕ್ಲೇಮುದಾರನು ಸಂತಾನೋತ್ಪತ್ತಿ ಅಂಗವನ್ನು ಕಳೆದುಕೊಂಡಿರುವುದರಿಂದ ಅವನ ಮೇಲೆ ಅದರಿಂದಾಗುವ ಪರಿಣಾಮಗಳ ಬಗ್ಗೆ ಎಲ್ಲೂ ಸೊಲ್ಲೆತ್ತಿರುವುದಿಲ್ಲ ಎಂಬ ಅಂಶವನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿರುವರು.ಅವರು ಕ್ಲೇಮುದಾರನಿಗಾದ ಗಾಯಗಳನ್ನು ಮತ್ತು ಅದಕ್ಕೆ ಸಂದಾಯ ಮಾಡಬಹುದಾದ ನಷ್ಟ ಪರಿಹಾರವನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದಂತೆ ಕ್ಲೇಮುದಾರನು ಪ್ರಾರ್ಥನೆಯನ್ನು ಪರಿಗಣಿಸಲು ಮಾರ್ಗಸೂಚಿಗಳಾಗಿ ಆಸ್ಟ್ರೇಲಿಯ ಕ್ಯಾಪಿಟಲ್ ಟೆರಿಟೋರಿಯ ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮ, 1951 ರ ಕಡೆ ಈ ನ್ಯಾಯಾಲಯದ ಗಮನವನ್ನು ಸೆಳೆಯಲು ಪ್ರಯತ್ನಿಸಿದ್ದಾರೆ.ಅದಕ್ಕೆ MOOTWJN WDUJJc @ https://www.healthline.com/health/low testosterone/effects-on-body # ದಲ್ಲಿರುವ ಜಾರ್ಜ್ ಕ್ರುಸಿಕ್, ಎಂಡಿ ಅವರು 2014 ರ ಏಪ್ರಿಲ್ನಲ್ಲಿ ವೈದ್ಯಕೀಯ ರಿವ್ಯೂವನ್ನು ಸಲ್ಲಿಸಿದ್ದ ಮೆಡಿಕಲ್

ಜರ್ನಲ್ನ ವರದಿಯ ಕಡೆ ಸಹ ಈ ನ್ಯಾಯಾಲಯದ ಗಮನ ಸೆಳೆಯಲು ಪ್ರಯತ್ನಿಸಿದ್ದು, ಅದರ ಮುದ್ರಿತ ಪ್ರತಿಯನ್ನು ತೆಗೆದುಕೊಂಡು ಈ ನ್ಯಾಯಾಲಯದ ಮುಂದೆ ಮಂಡಿಸಿರುವರು.ಅದನ್ನು ಆಧರಿಸಿ ಅವರು ಮಂಡಿಸಿದ ವಾದವೇನೆಂದರೆ, ದೇಹದ ಪ್ರಮುಖ ಅಂಗವಾಗಿರುವ ವೃಷಣಗಳು, ಲೈಂಗಿಕ ಹಾರ್ಮೋನುಗಳನ್ನು ಉತ್ಪಾದಿಸುತ್ತವೆ ಹಾಗೂ ಕಾಮ ಪ್ರಚೋದಕ ವರ್ತನೆಯ ವೈಲಕ್ಷಣಗಳ ಸಂಬಂಧದಲ್ಲಿ ಅದರ ಪಾತ್ರ ನಿರ್ಣಾಯಕವಾಗಿದೆ ಮತ್ತು ದೇಹದ ಕೇಂದ್ರ ಭಾಗವನ್ನು ನಿಯಂತ್ರಿಸುವ ಮಸ್ತಿಷ್ಕ ನಿಮ್ನಾಂಗದ (hypothalamus) ಉತ್ಪಾದನೆಗೂ ಈ ಅಂಗವು ಪ್ರಮುಖ ಪಾತ್ರವಹಿಸುತ್ತದೆ ಎಂದು ಈ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿರುವರು.ಮುಂದುವರೆಸುತ್ತಾ ವೃಷಣಗಳು ಪುರುಷ ಹಾರ್ಮೋನುಗಳನ್ನು ಸ್ರವಿಸುತ್ತದೆ ಅದರಲ್ಲಿ ಪ್ರಮುಖವಾಗಿ ಪುರುಷರ ಸಂತಾನೋತ್ಪತ್ತಿಗೆ ಮತ್ತು ಲೈಂಗಿಕತೆಗೆ ಸ್ನಾಯುಗಳ ಸಮೂಹಕ್ಕೆ ಮತ್ತು ಮೂಳೆ ಸಾಂದ್ರತೆಗೆ ಪ್ರತಿಯೊಬ್ಬ ಗಂಡಸಿಗೂ ಪರಿಣಾಮಕಾರಿಯಾದ ಅಂಗವಾದ ವೃಷಣಗಳ ಹಾರ್ಮೋನು ಸ್ರವಿಸುವಿಕೆಯು ಪ್ರಮುಖವಾಗಿರುತ್ತದೆ ಮತ್ತು ವರ್ತನೆಯ ವಿಧಾನದಲ್ಲಿ ಈ ವೃಷಣಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ವರದಿಯಲ್ಲಿ ಸೂಚಿಸಲಾಗಿದೆ.ಈ ವರದಿಯ ಅನುಸಾರವಾಗಿ ಹದಿಹರೆಯದಲ್ಲಿ ಅದು ಉತ್ತುಂಗ ಸ್ಥಿತಿಯಲ್ಲಿದ್ದು 30 ವರ್ಷಗಳ ವಯಸ್ಸಿಗೆ ಇಳಿಮುಖವಾಗುತ್ತಾ ಸ್ಥಿರತೆಯನ್ನು ಪಡೆಯಲು ಈ 0 ಅಂಗದ ಪಾತ್ರವು ಮುಖ್ಯವಾಗಿದೆ.ಈ ಮೊಕದ್ದಮೆಯಲ್ಲಿನ ಕ್ಷೇಮುದಾರನು ಮೇಲೆ ಹೇಳಲಾದ ಅಪಘಾತದ ಪರಿಣಾಮವಾಗಿ ಅವನು ತನ್ನ ಹದಿಹರೆಯ ಉತ್ತುಂಗದಲ್ಲಿರಬೇಕಾದರೆ ಅಂದರೆ 17 ನೇ ವರ್ಷದಲ್ಲಿ ಅವನ ವೃಷಣಗಳನ್ನು ಕಳೆದುಕೊಂಡಿದ್ದಾನೆ.ಅಂದರೆ ಅವನ ಪುರಷತ್ವವನ್ನು ಅವನಿಂದ ತೆಗೆದುಹಾಕಲಾಗಿದೆ.ಅವನನ್ನು ನಿರ್ಲಿಂಗಿ ವ್ಯಕ್ತಿಯನ್ನಾಗಿ ಮಾಡಲಾಗಿದೆ.ಈ ಎಲ್ಲ ಕಾರಣಗಳಿಂದ ಕೇಮುದಾರನು ಸಾಮಾನ್ಯ ಆರೋಗ್ಯ ಪುರುಷನಾಗಿ ಅವನು ತನ್ನ ಜೀವನದಲ್ಲಿ ವೈವಾಹಿಕ/ಲೈಂಗಿಕ ಜೀವನಾನುಭವವನ್ನು ಪಡೆಯಲು ಎಂದಿಗೂ ಸಾಧ್ಯವಾಗುವುದಿಲ್ಲ ಮತ್ತು ಅವನಿಗೆ ವೈವಾಹಿಕ ಲೈಂಗಿಕ ಆತ್ಮಸ್ಥೈರ್ಯವನ್ನು ತುಂಬಲು ಸಾಧ್ಯವಾಗುವುದಿಲ್ಲ ಎಂದು ನಿವೇದಿಸಿರುವರು.ತಮ್ಮ ವಾದವನ್ನು ಮುಂದುವರೆಸಿ ಅವರು, ಕ್ಷೇಮುದಾರನು ತನ್ನ ಶಿಶ್ನ ಮತ್ತು ವೃಷಣಗಳನ್ನು ಕಳೆದುಕೊಂಡಿರುವುದರಿಂದ ಅವನು ಸಾಮಾಜಿಕವಾಗಿ ನಪುಂಸಕನೆಂದು ದೂಷಣೆಗೆ ಒಳಗಾಗಿರುವನು.ಸಮಾಜದಲ್ಲಿ ಅವನು ಜೀವಿಸುವುದಕ್ಕೆ ಹಾಗೂ ತನ್ನದೇ ಸ್ನೇಹಿತರ ವಲಯದಲ್ಲಿ ಗುರುತಿಸಿಕೊಳ್ಳುವುದಕ್ಕೆ ಅವನಿಗೆ ದುಸ್ತರವಾಗಿದೆ ಮತ್ತು ಇದೆಲ್ಲವನ್ನು ಮೀರಿ ಅವನು ಜೀವನ ನಡೆಸಬೇಕಾಗಿದೆ ಎಂದು ನಿವೇದಿಸಿರುವರು.ನ್ಯಾಯವಾದಿಗಳು ತಮ್ಮ ಹೇಳಿಕೆಯಲ್ಲಿ, ಕೇಮುದಾರನನ್ನು ಸಾಮಾಜಿಕ ವಲಯದಲ್ಲಿ ' ಬಹಿಷ್ಕೃತ ' ನಂತೆ ಪರಿಗಣಿಸಲಾಗುತ್ತದೆ ಹಾಗೂ ಅವನ ಸಾಮಾನ್ಯ ಜೀವನದಲ್ಲಿನ ಗಳಿಕೆ ಮತ್ತು ಎಲ್ಲ ಇತರ ಪ್ರಾಪಂಚಿಕ ವಸ್ತು ವಿಷಯಗಳಿಗಿಂತಲೂ ಈ ರೀತಿಯ ಸಾಮಾಜಿಕ ದೂಷಣೆಯೂ ಅವನಿಗೆ ಮಾನಸಿಕವಾಗಿ ಹೆಚ್ಚು ಹಾನಿಯುಂಟು ಮಾಡುತ್ತದೆ ಎಂದು ಅಭಿವ್ಯಕ್ತಿಸಿರುವರು.ಆದುದರಿಂದ ಸದರಿ ಅಪಘಾತದಲ್ಲಿ ಕ್ಷೇಮುದಾರನಿಗಾದ ನಷ್ಟಕ್ಕೆ ಈಗ ನೀಡಲಾಗಿರುವ ಯಾವುದೇ ಪರಿಹಾರವೂ ಸಮಾನವಾಗುವುದಿಲ್ಲ ಎಂದು ನ್ಯಾಯವಾದಿಗಳು ತಮ್ಮ ನಿವೇದನೆಯಲ್ಲಿ ಅಭಿಪ್ರಾಯಪಟ್ಟಿರುತ್ತಾರೆ.

11. ಸದರಿ ವಾದಾಂಶಗಳನ್ನು ಈ ನ್ಯಾಯಾಲಯವು ಅಂಗೀಕರಿಸಿದರೂ, ಇದನ್ನು ಕೇಮುದಾರನಿಗೆ ಪರಿಹಾರ ನೀಡುವುದನ್ನು ಹಣಕಾಸಿನ ಚೌಕಟ್ಟಿನೊಳಗೆ ತರಬಹುದೇ ಹೊರತು, ಅವನಿಗೆ ಆಗಿರುವ ನಷ್ಟಕ್ಕೆ ಯಾವ ರೀತಿಯ ಪರಿಹಾರವ ಸಮವಾಗುವುದಿಲ್ಲ ಎಂದು ತೋರುತ್ತದೆ.ಈ ಹಿನ್ನೆಲೆಯಲ್ಲಿ, ಈ ನ್ಯಾಯಾಲಯವು, ಘನ ಸರ್ವೋಚ್ಚ ಚ ನ್ಯಾಯಾಲಯದಿನಾಂಕ: 1.7.2013 ರಂದು ಜಿ. ರವೀಂದ್ರನಾಥ್ @ ಆರ್. ಚೌದರಿ ವಿರುದ್ಧ- ಇ. ಶ್ರೀನಿವಾಸ್ ಮತ್ತು ಮತ್ತೊಬ್ಬರು ಸಿವಿಲ್ ಅಪೀಲುಸಂಖ್ಯೆ: 5520/2013 ರಲ್ಲಿ (ಎಸ್ಎಲ್ಪಿ (ಸಿ)ಸಂಖ್ಯೆ: 14794/2012) ' ಮೊಕದ್ದಮೆಯಲ್ಲಿ ನೀಡಿದ ತೀರ್ಪನ್ನು ಅವಲಂಬನೆಯಾಗಿ ತೆಗೆದುಕೊಂಡು, ಅದರಲ್ಲಿ ಇದೇ ರೀತಿಯ ಸನ್ನಿವೇಶಗಳಲ್ಲಿ

ಸರ್ವೋಚ್ಚ ನ್ಯಾಯಾಲಯವು 19 ವರ್ಷಗಳಾಗಿದ್ದು, ಅದೇ ವಯಸ್ಸಿನ ಕ್ಷೇಮುದಾರನಿಗೆ ಪರಿಹಾರವನ್ನು ನೀಡುವ ವಿಷಯವನ್ನು ಪರಿಗಣಿಸಿ, ಆ ಕ್ಷೇಮುದಾರನಿಗೆ, ಅವನು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರಿಂದ ಚಿಕಿತ್ಸೆಗಾಗಿ ಒಟ್ಟು ವೆಚ್ಚವೇ 2,20,000/-ರೂಪಾಯಿಗಳನ್ನು ಮತ್ತು ಆಸ್ಪತ್ರೆ ವಾಸ, ಔಷಧಿ, ಶೂಷೆ ವೆಚ್ಚವನ್ನು ಒಳಗೊಂಡ ವೈದ್ಯಕೀಯ ವೆಚ್ಚಗಳಿಗಾಗಿ ಮುಂತಾದವುಗಳಿಗಾಗಿ ಒಟ್ಟು 6,00,000/-ರೂಪಾಯಿಗಳನ್ನು, ಅವನು ಅನುಭವಿಸಿದ ನೋವು, ಸಂಕಟ, ಹಾನಿಗಾಗಿ 3,00,000/-ರೂಪಾಯಿಗಳನ್ನು, ಕ್ಷೇಮುದಾರನ ಸೌಲಭ್ಯ ನಷ್ಟಕ್ಕಾಗಿ ಮತ್ತು ಸಂಭಾವ್ಯ ವಿವಾಹಕ್ಕಾಗಿ 4,00,000/-ರೂಪಾಯಿಗಳನ್ನು ನಿರೀಕ್ಷಿತ ಜೀವನದ ನಷ್ಟಕ್ಕಾಗಿ, ಭವಿಷ್ಯದ ಗಳಿಕೆಯ ನಷ್ಟಕ್ಕಾಗಿ ಮತ್ತೆ 5,00,000/ರೂಪಾಯಿಗಳ ಮೊತ್ತವನ್ನು ಅವನಿಗೆ ಮಂಜೂರು ಮಾಡಿರುತ್ತದೆ.

12. ಮಾನ್ಯ ನ್ಯಾಯವಾದಿಗಳಾದ ಶ್ರೀ ಗಿರೀಶ್ ಭಟ್ ಅವರು, ಈ ವ್ಯವಹರಣೆಗಳಲ್ಲಿ ಕ್ಷೇಮುದಾರನಿಗೆ ಸಂದಾಯ ಮಾಡಬೇಕಾದ ನಷ್ಟ ಪರಿಹಾರವನ್ನು ಪರಿಗಣಿಸಲು ಸರ್ವೋಚ್ಚ ನ್ಯಾಯಾಲಯದ ಈ ತೀರ್ಪನ್ನು ಆಧಾರವಾಗಿಟ್ಟು ಚ ಕೊಳ್ಳಬಹುದೆಂದು ತಿಳಿಸಿರುತ್ತಾರೆ.ಅವರು ಮುಂದುವರೆದು, ಕೇಮುದಾರರಿಗೆ ನಷ್ಟ ಪರಿಹಾರವನ್ನು ಪರಿಗಣಿಸುವಾಗ, ಮೇಲ್ಕಂಡ ಸದರಿ ವಿಷಯಗಳನ್ನು ಸರ್ವೋಚ್ಚ ನ್ಯಾಯಾಲಯದ ಮುಂದೆ ಮಂಡಿಸದಿದ್ದರಿಂದಾಗಿ, ಸರ್ವೋಚ್ಚ ನ್ಯಾಯಾಲಯವು ಪರಿಗಣಿಸದಿದ್ದ ಇತರ ಅಂಶಗಳನ್ನು, ಕ್ಷೇಮುದಾರನು ಉಳಿದ ಜೀವಿತಾವಧಿಯಲ್ಲಿ ಎದುರಿಸಬೇಕಾದ ಸಾಮಾಜಿಕ ಕಳಂಕ ಮತ್ತು ಬಹಿಷ್ಕಾರದ ಅಂಶಗಳ ಹಿನ್ನೆಲೆಯಲ್ಲಿ ಈ ನ್ಯಾಯಾಲಯವು ಪರಿಹಾರದ ಮೊತ್ತವನ್ನು ಪರಿಗಣಿಸಬೇಕು ಎಂದು ತಿಳಿಸಿರುತ್ತಾರೆ.

13. ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಈ ನ್ಯಾಯಾಲಯವು ಈ ವಿಷಯದಲ್ಲಿ ಮೇಲೆ ಉಲ್ಲೇಖಿಸಿದ ತೀರ್ಪನ್ನು ಆಧಾರವಾಗಿಟ್ಟುಕೊಂಡು ಕ್ಷೇಮುದಾರನಿಗೆ ಸಂದಾಯ ಮಾಡಬೇಕಾದ ನಷ್ಟ ಪರಿಹಾರವನ್ನು ಪ್ರತ್ಯೇಕವಾಗಿ ಮರು ನಿರ್ಧರಿಸಬಯಸುತ್ತದೆ.ಹಾಗೇ ನಿರ್ಧರಿಸುವಾಗ, ಸದರಿ ಮೊಕದ್ದಮೆಯ ಮತ್ತು ಈ ಮೊಕದ್ದಮೆಯ ಮುಖ್ಯ ಅಂಶಗಳನ್ನು ಪರಿಗಣಿಸಬೇಕಾದುದು ಅಗತ್ಯ.

14. ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಓದಿದಾಗ, ಮೇಲೆ ಹೇಳಲಾದ ಮೊಕದ್ದಮೆಯಲ್ಲಿ, ವೃಷಣಗಳಿಗೆ ಮಾತ್ರ ಹಾನಿಯಾಗಿರುತ್ತದೆ.ಆದರೆ ಶಿಶ್ನವನ್ನು ತೆಗೆದುಹಾಕಿರುವುದಿಲ್ಲ.ಆದರೆ, ಪ್ರಸ್ತುತ ಮೊಕದ್ದಮೆಯಲ್ಲಿನ ಕ್ಷೇಮುದಾರನ ಸ್ಥಿತಿಯೂ, ಸರ್ವೋಚ್ಚ ನ್ಯಾಯಾಲಯದ ಮುಂದಿನ ಸದರಿ ವ್ಯವಹರಣೆಗಳಲ್ಲಿನ ಕೇಮುದಾರನ ಸ್ಥಿತಿಗಿಂತ ತುಂಬಾ ಶೋಚನೀಯವಾಗಿದೆ.ಅಲ್ಲದೆ, ಶಿಶ್ನದ ಸಾಮರ್ಥ್ಯವನ್ನು ಅದರ ಸಾಮಾನ್ಯ ಸ್ಥಿತಿಗೆ ತರಬಹುದೇ?ಎಂಬುದನ್ನು ದಾಖಲೆಯಲ್ಲಿ ತಿಳಿಸಿರುವುದಿಲ್ಲ.ಆದಾಗ್ಯೂ, ಸರ್ವೋಚ್ಚ ನ್ಯಾಯಾಲಯವು ಈ ಸಂಬಂಧದಲ್ಲಿ ಚ ಭವಿಷ್ಯದ ವೈದ್ಯಕೀಯ ವೆಚ್ಚವಾಗಿ 6,00,000/-ರೂಪಾಯಿಗಳನ್ನು ನೀಡಲು ಪರಿಗಣಿಸಿರುತ್ತದೆ.

15. ಪ್ರಸ್ತುತ ಮೊಕದ್ದಮೆಯಲ್ಲಿ, ದಾಖಲೆಗಳಲ್ಲಿ ಕಂಡುಬಂದಿರುವಂತೆ, ಇಲ್ಲಿಯ ಕೇಮುದಾರನ ಶಿಶ್ನ ಮತ್ತು ವೃಷಣಗಳನ್ನು ಬುಡಸಮೇತ ತೆಗೆದುಹಾಕಲಾಗಿರುತ್ತದೆ ಮತ್ತು ಅದನ್ನು ಕಸಿ ಮಾಡಲು ಅಥವಾ ಪುನರ್ ಸೃಷ್ಟಿಸಲು ಸಾಧ್ಯವೇ ಎಂಬುದನ್ನು ಕ್ಷೇಮುದಾರನಾಗಲೀ ಅಥವಾ ವೈದ್ಯರಾಗಲೀ ತಾವು ನೀಡಿದ ಸಾಕ್ಷ್ಯದಲ್ಲಿ ಈ ವಿಷಯದ ಅಂಶಗಳನ್ನು ಪ್ರತಿಪಾದಿಸಿರುವುದಿಲ್ಲ.ಆದುದರಿಂದ, ಈ ನ್ಯಾಯಾಲಯವು ಈ ಅಂಶಗಳೆಲ್ಲವನ್ನು ಸಹ ಪರಿಗಣನೆಗೆ ತೆಗೆದುಕೊಳ್ಳಬೇಕಾಗಿದೆ.

16. ಈ ಹಿನ್ನೆಲೆಯಲ್ಲಿ, ಈ ನ್ಯಾಯಾಲಯವು, ಇದರಲ್ಲಿನ ಕ್ಷೇಮುದಾರನಿಗೆ ನ್ಯಾಯಯುತವಾದ, ಯುಕ್ತವಾದ ಮತ್ತು ಸಮಂಜಸವಾದ ಪರಿಹಾರವನ್ನು ಒದಗಿಸಲು ಆಧಾರವಾಗಿ ಮಾತ್ರ ಸರ್ವೋಚ್ಚ ನ್ಯಾಯಾಲಯದ ಮೇಲೆ ಉಲ್ಲೇಖಿಸಿದ ತೀರ್ಪನ್ನು ಆಧಾರವಾಗಿಟ್ಟುಕೊಂಡು, ಪ್ರತ್ಯೇಕವಾಗಿ ಕ್ಷೇಮುದಾರನಿಗೆ ಪರಿಹಾರವನ್ನು ನೀಡುವುದನ್ನು ಪರಿಗಣಿಸಲು ಪ್ರಯತ್ನಿಸುತ್ತದೆ.ಆದುದರಿಂದ, ಈ ಪ್ರಸ್ತುತ ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು, ಕ್ಷೇಮುದಾರನು ಒಪ್ಪಿಕೊಂಡಿರುವಂತೆ ಸರ್ಕಾರಿ

ಆಸ್ಪತ್ರೆಯಲ್ಲಿಯೇ ಮೂರು ತಿಂಗಳಿಗಿಂತ ಹೆಚ್ಚು ಕಾಲ ಅವನು ಚಿಕಿತ್ಸೆ ಚ ಪಡೆದುಕೊಂಡಿದ್ದರಿಂದ, ವೈದ್ಯಕೀಯ ವೆಚ್ಚವಾಗಿ ಕ್ಲೇಮುದಾರನಿಗೆ ನೀಡಿದ 15,000/ಪರಿಹಾರವನ್ನು ಹಾಗೆ ಉಳಿಸಿಕೊಂಡಿದೆ.

17. ಶೂಷೆ, ಪೌಷ್ಠಿಕ ಆಹಾರ, ಸಾರಿಗೆ ಹಾಗೂ ಸಂಬಂಧಪಟ್ಟ ಇತರ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ನ್ಯಾಯಾಧಿಕರಣವು ಪರಿಹಾರವಾಗಿ ನೀಡಿದ 5,000/-, 3,000/-ಮತ್ತು 3,000/- ರೂ.ಗಳು ತುಂಬಾ ಕನಿಷ್ಠ ಪರಿಹಾರವಾಗಿದೆ.ಈ ಪ್ರಸ್ತುತ ಮೊಕದ್ದಮೆಯಲ್ಲಿ ಅದೆಲ್ಲವನೂ ಒಟ್ಟಾಗಿ 35,000/- ರೂ.ಗಳೆಂದು ಪರಿಗಣಿಸಲಾಗಿದೆ.

18. ಮೂರು ತಿಂಗಳಿಗಿಂತ ಹೆಚ್ಚಿನ ಅವಧಿಯಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ಕ್ಲೇಮುದಾರನು ಅನುಭವಿಸಿದ ಸಂಕಟ, ಬಾಧೆ ಮತ್ತು ಆತಂಕಗಳ ಕಡೆ ಗಮನಹರಿಸಿದಾಗ, ಅದಕ್ಕೆ ನಷ್ಟಪರಿಹಾರವಾಗಿ ನೀಡಿದ್ದ ಮಂಜೂರಾದ ಒಟ್ಟು 15,000/-ರೂಪಾಯಿಗಳನ್ನು ಮೇಲೆ ಹೇಳಲಾದ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಪರಿಗಣಿಸಿದ್ದಂತೆ 3,00,000/-ರೂಪಾಯಿಗಳಿಗೆ ಚ ಹೆಚ್ಚಿಸಲಾಗಿದೆ.

19. ಸೌಲಭ್ಯ ನಷ್ಟಕ್ಕೆ ಮತ್ತು ಸಂಭಾವ್ಯ ವಿವಾಹಕ್ಕೆ ಸಂಬಂಧಿಸಿದಂತೆ, ಈ ನ್ಯಾಯಾಲಯ ಪ್ರಸ್ತುತ ಮೊಕದ್ದಮೆಯ ಸಂಗತಿಯ ಬೆಳಕಿನಲ್ಲಿ ಪರಿಗಣಿಸಿದರೆ, ಕ್ಲೇಮುದಾರನ ಶಿಶ್ನ ಮತ್ತು ವೃಷಣಗಳನ್ನು ಬುಡಸಮೇತ ಸಂಪೂರ್ಣವಾಗಿ ತೆಗೆದುಹಾಕಲಾಗಿದ್ದು ಇಲ್ಲಿ ವಿವಾಹದ ಸಾಧ್ಯತೆಯಾಗಲೀ ಅಥವಾ ಅನ್ಯಥಾ ಲೈಂಗಿಕ ಚಟುವಟಿಕೆ ನಡೆಸುವ ಸಾಧ್ಯತೆಯಾಗಲೀ ಇರಲು ಸಾಧ್ಯವಿಲ್ಲ ಎಂಬ ಅಂಶವನ್ನು ಪರಿಗಣಿಸಿ, ಜೀವನಪರ್ಯಂತ ಅಂತಹ ಸಂತುಷ್ಟಿಗಳನ್ನು ಸಂಪೂರ್ಣವಾಗಿ ಕಳೆದುಕೊಂಡಿರುವುದರಿಂದ, ಅದಕ್ಕಾಗಿ 6,00,000/-ರೂಪಾಯಿಗಳ ಮೊತ್ತವನ್ನು ನಷ್ಟಪರಿಹಾರವಾಗಿ ಪರಿಗಣಿಸಲಾಗಿದೆ.

20. ಮೇಲೆ ಉಲ್ಲೇಖಿಸಿದ ವೈದ್ಯಕೀಯ ವರದಿಯಲ್ಲಿ, ಇಲ್ಲಿನ ಕ್ಲೇಮುದಾರನು ತನ್ನ ತುಂಬು ಹದಿಹರೆಯದ ವಯಸ್ಸಿನಲ್ಲಿಯೇ ಲೈಂಗಿಕ ಹಾರ್ಮೋನುಗಳನ್ನು ಉತ್ಪಾದನೆ ಮಾಡುವ ವೃಷಣಗಳನ್ನು ಕಳೆದುಕೊಂಡಿರುವುದರಿಂದ, ಅದು ಅವನ ಒಟ್ಟಾರೆ ನಡವಳಿಕೆ, ವರ್ತನೆ ವಿಧಾನದಲ್ಲಿ ಜೀವನಾನುಭವ ಮತ್ತು ದೈಹಿಕ ದಾರ್ಢ್ಯತೆಯ ಮೇಲೆ ಸಾಕಷ್ಟು ಪರಿಣಾಮ ಬೀರುವುದೆಂದು ವೈದ್ಯಕೀಯ ವರದಿಯಲ್ಲಿ ಸೂಚಿಸುವುದರಿಂದ, ಅಂಥ ಸೌಕರ್ಯಗಳಿಗೆ ಯಾವ ಪರಿಹಾರವನ್ನು ನೀಡಲು ಸಾಧ್ಯವಾಗದಿರುವುದರಿಂದ ನಷ್ಟ ಪರಿಹಾರವನ್ನು ಐತೀರ್ಪಿನಲ್ಲಿ ಪರಿಗಣಿಸಿರುವುದಿಲ್ಲ.ಆದುದರಿಂದ, ಸೌಲಭ್ಯಗಳ ನಷ್ಟಕ್ಕಾಗಿ ಮತ್ತೆ 5,00,000/-ರೂಪಾಯಿಗಳ ಮೊತ್ತದ ಪರಿಹಾರವನ್ನು ಪರಿಗಣಿಸಲಾಗಿದೆ.

21. ಈಗ, ಕ್ಲೇಮುದಾರನು ತನ್ನ ಉಳಿದ ಜೀವಿತಾವಧಿಯಲ್ಲಿ ಎದುರಿಸಬೇಕಾದ ಸಾಮಾಜಿಕ ನಿಂದನೆ ಮತ್ತು ದೂಷಣೆಯ ವಿಚಾರಕ್ಕೆ ಬರುವುದಾದರೆ, ಒಪ್ಪಿಕೊಂಡಿರುವಂತೆ, ಕ್ಲೇಮುದಾರನನ್ನು ಪುರುಷರ ಸಮೂಹವು ಅವನ ದೈಹಿಕ ಪರಿಸ್ಥಿತಿಯಿಂದಾಗಿ ಅವನು ನಿರ್ಲಿಂಗಿ ಅಥವಾ ನಪುಂಸಕನಾಗುವ ಮಟ್ಟಕ್ಕೆ ಇಳಿಸಿ ಅವನ ಒಡನಾಟವನ್ನು ಒಪ್ಪಿಕೊಳ್ಳದಂತಹ ರೀತಿಯಲ್ಲಿ ಪುರುಷರು ಅವನಿಗೆ ಪರೋಕ್ಷ ಬಹಿಷ್ಕಾರಕ್ಕೆ ಗುರಿಪಡಿಸಬಹುದು.ಅವನ ಜೀವನದುದ್ದಕ್ಕೂ ಈ ಸಾಮಾಜಿಕ ನಿಂದನೆ ದೂಷಣೆಯೂ ಅವನನ್ನು ಅಂಟಿಕೊಂಡಿರುತ್ತದೆ.ಈ ಕಾರಣದಿಂದಾಗಿಯೇ, ಅವನಿಗೆ ಪರಿಹಾರವನ್ನು ನೀಡಬೇಕಾಗಿದೆ.ತದನುಸಾರವಾಗಿ, ಅದಕ್ಕಾಗಿಯೇ ಮತ್ತೆ 4,50,000/- ರೂ.ಗಳ ಪರಿಹಾರವನ್ನು ನೀಡಲಾಗಿದೆ.ಹಾಗೆ ನೀಡುವಾಗ, ಈ ನ್ಯಾಯಾಲಯವು, ಮೇಲೆ ಹೇಳಲಾದ ಸನ್ನಿವೇಶಗಳಿಂದಾಗಿ ಗಳಿಕೆ ಸಾಮರ್ಥ್ಯದ ನಷ್ಟವನ್ನು ಮತ್ತು ಭವಿಷ್ಯದ ಗಳಿಕೆ ಸಾಮರ್ಥ್ಯದ ನಷ್ಟವನ್ನು ಪರಿಗಣಿಸಿ, ಅಧಿ ವಿಚಾರಣಾ ನ್ಯಾಯಾಲಯವು ಪರಿಗಣಿಸಿದ್ದ 1,29,600/- ರೂ.ಗಳನ್ನು ಮೇಲೆ ಉಲ್ಲೇಖಿಸಲಾದ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಪರಿಗಣಿಸಿರುವಂತೆ ಚ 5,00,000/- ರೂ.ಗಳ ಮೊತ್ತಕ್ಕೆ ಹೆಚ್ಚಿಸಲು ಈ ನ್ಯಾಯಾಲಯವು ನಿರ್ಣಯಿಸಿದೆ.

22. ಇದರೊಂದಿಗೆ, ನ್ಯಾಯಾಧಿಕರಣವು ಕ್ಲೇಮುದಾರನಿಗೆ ಐತೀರ್ಪಿನಲ್ಲಿ ಮಂಜೂರು ಮಾಡಿದ 2,70,000/-ರೂಪಾಯಿಗಳಿಗೆ ಬದಲಾಗಿ, ಒಟ್ಟು 24,00,000/-ರೂಪಾಯಿಗಳ ಪರಿಷ್ಕೃತ ಪರಿಹಾರವನ್ನು ಪಡೆಯಲು ಅವನು ಹಕ್ಕುಳ್ಳವನಾಗಿರುತ್ತಾನೆ.ಮೇಲೆ ಹೇಳಲಾದ ಪರಿಷ್ಕೃತ ಪರಿಹಾರಕ್ಕೆ ಈ ಅರ್ಜಿ ಸಲ್ಲಿಸಿದ ದಿನಾಂಕದಿಂದ ಇಡೀ ಮೊತ್ತವನ್ನು ಠೇವಣಿ ಇಡುವ ದಿನಾಂಕದವರೆಗೆ ವಾರ್ಷಿಕ ಶೇ .6 ರಂತೆ ಬಡ್ಡಿದರವನ್ನು ಪಾವತಿ ಮಾಡತಕ್ಕದ್ದು.

23. ಈ ಹಂತದಲ್ಲಿ, ಪ್ರತ್ಯರ್ಜಿದಾರ-ವಿಮಾದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು, ನ್ಯಾಯಾಧಿಕರಣವು ಐತೀರ್ಪಿನಲ್ಲಿ ಮಂಜೂರು ಮಾಡಿದ ಮೂಲ ನಷ್ಟ ಪರಿಹಾರವಾದ 2,70,000/-ರೂಪಾಯಿಗಳ ಮೊತ್ತವನ್ನು ಈಗಾಗಲೇ ಬಡ್ಡಿಯೊಂದಿಗೆ ಸಂದಾಯ ಮಾಡಲಾಗಿದೆ.ಆದುದರಿಂದ ಸಂದಾಯ ಮಾಡಬೇಕಾದ ಹಣವಾದ 21,30,000/-ರೂಪಾಯಿಗಳು ಹೆಚ್ಚಿಸಲಾದ ಪರಿಹಾರದ ಹಣವಾಗಿದ್ದು, ಅದನ್ನು ಎಂಎಸಿಟಿ-II, ಬಳ್ಳಾರಿ, ಇದರ ಮುಂದೆ ಠೇವಣಿ ಇಡುವ ಮೂಲಕ ಈ ದಿನಾಂಕದಿಂದ ನಾಲ್ಕು ವಾರದೊಳಗಾಗಿ ಬಡ್ಡಿಯೊಂದಿಗೆ ಸಂದಾಯ ಮಾಡಲಾಗುವುದು ಎಂದು ನಿವೇದಿಸಿರುವರು.

24. ಎಂಎಸಿಟಿ-II, ಬಳ್ಳಾರಿಯ ಕಡತದಲ್ಲಿನ ಎಂಬಿಸಿಸಂಖ್ಯೆ: 1346/2011 ಅನ್ನು ವಿಲೇ ಮಾಡುವಾಗ ಹೆಚ್ಚಿಸಲಾದ 21,30,000/-ರೂಪಾಯಿಗಳ ನಷ್ಟ ಪರಿಹಾರವನ್ನು ಬಡ್ಡಿಯೊಂದಿಗೆ ಠೇವಣಿ ಇಡುವಂತೆ 2 ನೇ ಪ್ರತ್ಯರ್ಜಿದಾರನಿಗೆ ಈ ಮೂಲಕ ನಿರ್ದೇಶಿಸಲಾಗಿದೆ.ಅದನ್ನು ಕ್ಲೇಮುದಾರನಿಗೆ ಈ ಮುಂದಿನ ರೀತಿಯಲ್ಲಿ ಬಿಡುಗಡೆ ಮಾಡಲು ಪರಿಗಣಿಸತಕ್ಕದ್ದು.

25. ಠೇವಣಿ ಇಡಬೇಕಾದ ಒಟ್ಟು ನಷ್ಟ ಪರಿಹಾರವು 24,00,000/ ರೂ.ಗಳಾಗಿದ್ದು, (ಇದರಲ್ಲಿ ಮೂಲ ಮೊಬಲಗು 21,30,000/-ರೂಪಾಯಿಗಳು ಮತ್ತು ಸಂಚಿತವಾದ ಬಡ್ಡಿಯ ಭಾಗ ಒಳಗೊಂಡಿರುತ್ತದೆ. )ಅದನ್ನು ನಿಯತವಾಗಿ ಬಡ್ಡಿಯನ್ನು ಪಡೆಯುವ ಹಕ್ಕಿನೊಂದಿಗೆ ಹತ್ತು ವರ್ಷಗಳ ಅವಧಿಗೆ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿ ಇಡತಕ್ಕದ್ದು ಮತ್ತು ಬಡ್ಡಿಗೆ ಸಂಬಂಧಿಸಿದಂತೆ ಸಂಚಿತವಾದ ಉಳಿದ ಹಣವನ್ನು ಕ್ಲೇಮುದಾರರಿಗೆ ಬಿಡುಗಡೆ ಮಾಡತಕ್ಕದ್ದು.

26. ಕೇಮುದಾರನಿಗೆ ನಷ್ಟ ಪರಿಹಾರವನ್ನು ನೀಡುವಾಗ ಈ ಮೊಕದ್ದಮೆಯನ್ನು ನಡೆಸಲು ಈ ನ್ಯಾಯಾಲಯಕ್ಕೆ ನೆರವು ನೀಡಿದ ಶ್ರೀ ಗಿರೀಶ್ ಭಟ್ ಅವರಿಗೆ ವಕೀಲರ ಶುಲ್ಕವಾಗಿ 25,000/-ರೂಪಾಯಿಗಳ ಹೆಚ್ಚುವರಿ ಹಣವನ್ನು ಸಹ ಮಂಜೂರು ಮಾಡಲು ಈ ನ್ಯಾಯಾಲಯ ನಿರ್ಣಯಿಸಿದೆ.

27. ಆದಾಗ್ಯೂ, ವಕೀಲರ ಶುಲ್ಕಕ್ಕೆ ಸಂಬಂಧಿಸಿದಂತೆ ನೀಡಲಾದ 25,000/ರೂಪಾಯಿಗಳನ್ನು ಮಾನ್ಯ ನ್ಯಾಯವಾದಿಯಾದ ಶ್ರೀ ಗಿರೀಶ್ ಭಟ್ (ನೋಂದಣಿಸಂಖ್ಯೆ: ಕರ್ನಾಟಕ 1404/2017) ಇವರ ಪರವಾಗಿ ಬಿಡುಗಡೆ ಮಾಡತಕ್ಕದ್ದು ಮತ್ತು ಸದರಿ ಮೊಬಲಗನ್ನು ಈ ನ್ಯಾಯಾಲಯದ ರಿಜಿಸ್ಟರಿಯಲ್ಲಿನ ಈ ಅಪೀಲಿನಲ್ಲಿ ಠೇವಣಿ ಇಡತಕ್ಕದ್ದು.ಅದನ್ನು ಮಾನ್ಯ ನ್ಯಾಯವಾದಿಗಳು ಮೊಬಲಗನ್ನು ಬಿಡುಗಡೆ ಮಾಡುವಂತೆ ಕೋರಿ ವೋಚರನ್ನು ಹಾಜರುಪಡಿಸಿದ ತರುವಾಯವೇ ಸದರಿ ಮೊತ್ತವನ್ನು ಬಿಡುಗಡೆಗೊಳಿಸತಕ್ಕದ್ದು ಮತ್ತು ಅದನ್ನು ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದಂತೆ, ಮುಂದಿನ ಆದೇಶಕ್ಕಾಗಿ ಈ ನ್ಯಾಯಾಲಯದ ಮುಂದೆ ಅದನ್ನು ಮಂಡಿಸುವ ಅಗತ್ಯವಿರುವುದಿಲ್ಲ.ಅದನ್ನು ಠೇವಣಿ ಮಾಡಿದಾಗ ರಿಜಿಸ್ಟ್ರಿಯೇ ಅದನ್ನು ಪರಿಗಣಿಸಿ ಮಂಜೂರು ಮಾಡತಕ್ಕದ್ದು.

ತದನುಸಾರವಾಗಿ, ಮೇಲೆ ಹೇಳಲಾದ ನಿಬಂಧನೆಗಳಿಗನುಸಾರವಾಗಿ,

ಅಪೀಲನ್ನು ವಿಲೇ ಮಾಡಲಾಗಿದೆ.